# ಶಿಕ್ಷಕರ ಕೆಲಸ ಏನು?



**ನಿಜಕ್ಕೂ ಶಿಕ್ಷಕರು ಮಾಡಬೇಕಾದ ಕೆಲಸ ಏನು? ಪಾಠ ಮಾಡುವುದೋ ಅಥವಾ ದಾಖಲೀಕರಣಕ್ಕೆ ಊರು– ಕಚೇರಿ ಸುತ್ತುವುದೋ?**

**■ ವೇದಾವತಿ. ಎಂ.**

ಸುಮಾರು ಹದಿನೈದು ವರ್ಷಗಳ ಹಿಂದೆ ಹೊಸದಾಗಿ ಪ್ರೌಢಶಾಲೆಗೆ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿದ ದಿನಗಳ ಹುರುಪು ಅದು. ಎಂಥಾ ಚೆಂದದ ದಿನಗಳವು. ಹೊಸ ಹೊಸ ಬೋಧನಾ ಪ್ರಯೋಗಗಳ ಪ್ರಯತ್ನ, ಗುರಿ ಮುಟ್ಟಿದಾಗ ಇನ್ನಷ್ಟು ಸಾಧಿಸುವ ಉತ್ಸಾಹ, ಉತ್ತಮ ಫಲಿತಾಂಶ ತರಿಸಿದ ಖುಷಿ, ಹೊಸದೇನೋ ಸಾಧಿಸುವ ಹುಮ್ಮಸ್ಸು. ಒಂದಷ್ಟು ವರ್ಷಗಳ ನಂತರ 'ಅಬ್ಬಾ.. ಒಂದು ಒಳ್ಳೆ ಉದ್ಯೋಗಕ್ಕೆ ಸೇರಿದೆ' ಎನ್ನುವ ಹೆಮ್ಮೆ. ವರ್ಷದಿಂದ ವರ್ಷಕ್ಕೆ ಶಿಷ್ಯವರ್ಗವನ್ನು ಹೆಚ್ಚಿಸಿಕೊಳ್ಳುತ್ತಿರುವೆ ಎಂಬ ಭಾವ. ಬೋಧನೆಯಲ್ಲಿ– ಕಲಿಕೆಯಲ್ಲಿ ಹೊಸತನ ಹುಟ್ಟುಹಾಕಿಕೊಂಡು ವಿದ್ಯಾರ್ಥಿಗಳಿಗೂ ಕಲಿಸುತ್ತಾ ನಾವೂ ಹೊಸದನ್ನೇನೋ ಕಲಿಯುತ್ತಿದ್ದೇವೆ ಎನ್ನುವ ಹುರುಪಿನಲ್ಲಿ ನನ್ನ ಶಿಕ್ಷಕ ವೃತ್ತಿ ಉರುಳುತ್ತಿತ್ತು. ಈ ಹಂತದಲ್ಲಿ ನಾನಿದ್ದ ಶಾಲೆಯಲ್ಲಿ ನಿವೃತ್ತರಾಗುತ್ತಿದ್ದ ಶಿಕ್ಷಕರೊಬ್ಬರು ನಮ್ಮೆಲ್ಲರನ್ನು ಕುರಿತು ಒಂದು ಮಾತು ಹೇಳಿದರು, 'ಮೇಡಂ ನಾನು ಒಳ್ಳೆ ಕಾಲದಲ್ಲಿ ತೃಪ್ತಿಯಾಗಿ ನನ್ನ ವೃತ್ತಿಯನ್ನು ಮುಗಿಸುತ್ತಿದ್ದೇನೆ. ನೀವುಗಳು ನಿವೃತ್ತಿಯಾಗೋ ಕಾಲಕ್ಕೆ ಸಾಕಪ್ಪಾ ಈ ಕೆಲಸ ಎನ್ನುವಂತಾಗುತ್ತೆ.' ಆಗೇನೂ ಅನಿಸದ ಅವರ ಮಾತು ಈ ವೃತ್ತಿಯಲ್ಲಿ ಇಪ್ಪತ್ತು ವರ್ಷಕ್ಕೆ ಸಮೀಪವಾಗುತ್ತಾ ಈಗ ನಿಜ ಅನಿಸತೊಡಗಿದೆ.

ಹೌದು ಸಂಪೂರ್ಣ ಕಲಿಕೆ– ಬೋಧನೆಗೆ ನಿರ್ದಿಷ್ಟವಾಗಿದ್ದ ಶಾಲೆಗಳು ಮತ್ತು ಶಿಕ್ಷಕರು ಇಂದು ದಾಖಲೆ ಒದಗಿಸುವ, ಸಿದ್ಧಪಡಿಸುವ ಯಂತ್ರಗಳಾಗಿದ್ದಾರೆ ಎಂಬುದು ಒಪ್ಪಿಕೊಳ್ಳಬೇಕಾದ ಸತ್ಯ. ಒಟ್ಟಿರುವ ಸರ್ಕಾರಿ ನೌಕರರಲ್ಲಿ ದೊಡ್ಡ ವರ್ಗ ಶಿಕ್ಷಕರದ್ದೇ ಆಗಿರುವುದರಿಂದ ಇದೊಂದು ಸಾರ್ವತ್ರಿಕ ಚರ್ಚೆ ಅಷ್ಟೆ. ಇಲಾಖೆ ಕೇಳುವ ದಾಖಲೆಗಳನ್ನು ಸಿದ್ಧಪಡಿಸುತ್ತಾ, ನಿರ್ವಹಿಸುತ್ತಾ ಬೋಧನೆಯಲ್ಲಿ ಹೊಸತನ ಹುಡುಕುವುದಿರಲಿ, ಬೋಧನೆಯಿಂದಲೇ ಶಿಕ್ಷಕ ಸದ್ದಿಲ್ಲದೆ ದೂರ ಸರಿಯುವ ದಿನ ದೂರವಿಲ್ಲ. ಎಸ್.ಎಸ್.ಎಲ್.ಸಿ.ಯ ಶಾಲಾ ಫಲಿತಾಂಶಗಳಿಗೆ ದಾಖಲೆ ಮಾಡುವ ಉತ್ಸಾಹದಲ್ಲಿದ್ದ ಶಿಕ್ಷಕರು ಇಲಾಖೆ ಕೇಳುವ, ಅಪೇಕ್ಷಿಸುವ ದಾಖಲೆಗಳನ್ನು ತಯಾರಿಸುತ್ತಾ ದಾಖಲೆ ಇಡುವಲ್ಲಿ ದಾಖಲೆ ಮಾಡುತ್ತಿದ್ದಾನೆ. ಬಹುಶಃ ಇವುಗಳಾವುದರ ಅರಿವು ಸಮಾಜಕ್ಕೆ, ಪೋಷಕರಿಗೆ ಇರುವುದಿಲ್ಲ. ಇಂದು ಶಿಕ್ಷಕರು ಸುಮಾರು 10 ರಿಂದ 12 ಇಲಾಖೆಗಳ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಉದಾ: ವಿದ್ಯಾರ್ಥಿಗಳ ಸ್ಕಾಲರ್‌ಷಿಪ್, ಸಮಾಜ ಕಲ್ಯಾಣ ಇಲಾಖೆ ವಿದ್ಯಾರ್ಥಿಗಳ ಬಸ್ ಪಾಸ್, ಸಾರಿಗೆ ಇಲಾಖೆ ಬ್ಯಾಂಕ್ ಅಕೌಂಟ್ ಮಾಡಿಸುವುದು, ಬ್ಯಾಂಕ್‌ನ ಕಾರ್ಯ ಇತ್ಯಾದಿ.

ಇವುಗಳೊಂದಿಗೆ ಆಧಾರ್ ಕಾರ್ಡ್ ಮಾಡಿಸುವುದು, ಸೈಕಲ್ ವಿತರಣೆ, ಬಿಸಿಯೂಟ, ಕ್ಷೀರಭಾಗ್ಯ, ಶೂ ವಿತರಣೆ, ಶಾಲೆ ಬಿಟ್ಟ ಮಕ್ಕಳ ಮಾಹಿತಿ, ವರ್ಗಾವಣೆ ಪತ್ರ ಪಡೆದವರ ಬಗ್ಗೆ, ಜಾತಿವಾರು ಮಾಹಿತಿ, ಶಾಲೆಗೆ ನಡೆದು ಬರುವವರು, ಬಸ್ಸಿನಲ್ಲಿ ಬರುವವರು ಇತ್ಯಾದಿ ಮಾಹಿತಿಗಳೂ ಸೇರಿಕೊಂಡಿವೆ. 'ಸರ್ಕಾರ ಕೊಡುವುದನ್ನು ಮೇಷ್ಟ್ರುಗಳಿಗೆ ಕೊಡೋದೇ ಕಷ್ಟವೇ' ಎಂದು ಪೋಷಕರಿಗೆ ಅನಿಸದೇ ಇರದು. ಆದರೆ ಅವುಗಳ ಸರಬರಾಜು ಮಾಡಿ, ಅದಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿಗೆ ತಲುಪಿಸುವಷ್ಟರಲ್ಲಿ ಸಾಕು ಸಾಕೆನಿಸುತ್ತದೆ. ಇಂತಹ ಕೆಲಸಗಳಿಗೆ ಶಾಲೆಗಳಲ್ಲಿ ಕರಣಿಕರು (ಕ್ಲರ್ಕ್)ಗಳು ಇರುತ್ತಾರಾದರೂ, ಶಿಕ್ಷಕರ ಸಹಕಾರವಿಲ್ಲದೆ ಈ ಕಾರ್ಯಗಳು ಅಸಾಧ್ಯ. ಇದಲ್ಲದೆ ಬೋಧನೆಗೆ ಸಂಬಂಧಿಸಿದ ಒಂದಷ್ಟು ದಾಖಲೆಗಳೂ ಕಡ್ಡಾಯ. ಶಾಲೆಗಳಲ್ಲಿ ಸ್ಥಾಪಿಸಲೇಬೇಕಾದ ವಿವಿಧ ಸಂಘಗಳು ಮತ್ತು ನಡೆಸಿದ ಕಾರ್ಯಕ್ರಮಗಳ ದಾಖಲೆಗಳು, ವಿಶೇಷ ದಿನಗಳ ಮಾಹಿತಿ ಸಿದ್ಧವಿರಬೇಕು. ಉದಾ: ಪರಿಸರ ದಿನ, ವಿವಿಧ ನಾಯಕರ ಜಯಂತಿಗಳನ್ನು ನಡೆಸಿದ್ದಕ್ಕೆ, ಯೋಗದಿನ ನಡೆಸಿದ್ದಕ್ಕೂ ದಾಖಲೆ, ಪ್ರಧಾನಿಯವರ ರೇಡಿಯೋ, ಟಿ.ವಿ. ಭಾಷಣ ಆಲಿಸಿದ್ದಕ್ಕೂ ದಾಖಲೆ. ದಾಖಲೆ... ದಾಖಲೆ... ದಾಖಲೆ!

ಇನ್ನು ಸಿಸಿಇ ವಿಧಾನದಲ್ಲಿ 10ನೇ ತರಗತಿ ವಿದ್ಯಾರ್ಥಿಗಳಿಗೆ ನಡೆಸುವ ಚಟುವಟಿಕೆಗಳು ಅಂತಿಮ ಪರೀಕ್ಷೆಗೆ ಆಂತರಿಕ ಅಂಕಗಳಾಗುತ್ತವೆ. ಪ್ರತೀ ವಿಷಯಕ್ಕೆ 20 ಅಂಶ ನೀಡಲು ಒಬ್ಬ  ವಿಷಯ ಶಿಕ್ಷಕರು ನೀಡುವ ಚಟುವಟಿಕೆ. ಆರೂ ವಿಷಯಗಳಿಗೆ ಒಟ್ಟು 48 ಚಟುವಟಿಕೆಗಳನ್ನು ವಿದ್ಯಾರ್ಥಿಗಳು ಮಾಡುವಷ್ಟರಲ್ಲಿ ಮಾರ್ಚ್‌ನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಅವರ ಮುಂದೆ ನಿಂತಿರುತ್ತದೆ. ಹೀಗೆ ಗಾಬರಿಯಾಗುವ ವಿದ್ಯಾರ್ಥಿಯಿಂದ ಎಲ್ಲಾ ಚಟುವಟಿಕೆಗಳನ್ನು ಸಂಗ್ರಹಿಸಿ, ಅವುಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಸೂಕ್ತವಾಗಿ ಸಿದ್ಧಪಡಿಸಿ, ಜೋಡಿಸಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ತಯಾರು ಮಾಡಲು ನಿಲ್ಲಬೇಕಾಗುತ್ತದೆ. ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಂದ ಚಟುವಟಿಕೆ ಮಾಡಿಸಿ, ಸಂಗ್ರಹಿಸಿಡುವುದೇ ದೊಡ್ಡ ಸಾಹಸ. ಹೆಚ್ಚಿನ ಮಕ್ಕಳಿಗೆ ಇದರಲ್ಲಿ ಅಂಕಗಳಿಕೆಯ ಬಗ್ಗೆ ಜವಾಬ್ದಾರಿ ಇಲ್ಲದಿರುವುದು, ಇದಕ್ಕಾಗಿ ಮಕ್ಕಳನ್ನು ಗದರಿಸುವಂತೆಯೂ ಇಲ್ಲ, ಹೆದರಿಸುವಂತೆಯೂ ಇಲ್ಲ. ಕಾರಣ ಮಕ್ಕಳನ್ನು ಶಿಕ್ಷಿಸುವಂತಿಲ್ಲ, ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳಲ್ಲಿ